## ಕರ್ನಾಟಕ ಸರ್ಕಾರ

ಸಂ:ಗ್ರಾಅಪ 78 ಗ್ರಾನೀಸ(2)2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:15.7.2014

### ಸುತ್ತೋಲೆ

NRDWPಯಡಿ 2014-15ರ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಅನುಮೋದನೆ ಕಾಯ್ದಿರಿಸಿ, ಈಗಾಗಲೇ 2013-14ರ ಸಾಲಿನಲ್ಲಿ ಸಕ್ಷಮ ಪ್ರಾಧಿಕಾರದಿಂದ / **ಸರ್ಕಾರದಿಂದ ಅಧಿಕೃತವಾಗಿ ಅನುಮೋದನೆಯಾಗಿ 2014-15ರ ಸಾಲಿಗೆ ಮುಂದುವರಿದಿರುವ ಎಲ್ಲಾ ಕುಡಿಯುವ ನೀರಿನ ಕಾಮಗಾರಿಗಳ ಬಿಲ್‌ಗಳನ್ನು ಪಾವತಿ ಮಾಡಲು ಅನುಮತಿಸಿದೆ.**

ಅಂತೆಯೇ ಸರ್ಕಾರದಿಂದ ಅಧಿಕೃತವಾಗಿ ಆಡಳಿತಾತ್ಮಕ ಅನುಮೋದನೆ ಹೊಂದಿರುವ ಬಹು ಗ್ರಾಮ ಯೋಜನೆಗಳು / DBOT ಯೋಜನೆಗಳಿಗೆ ಸಂಬಂಧಿಸಿದಂತೆ ಸಹ PRED ಕಾರ್ಯಪಾಲಕ ಇಂಜಿನಿಯರ್ ಟೆಂಡರ್ / ToR ನಿಬಂಧನೆಗಳನ್ವಯ ಪ್ರಸ್ತಾಪಿಸುವ ಬಿಲ್‌ಗಳನ್ನು ಸಹ ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿಗಳು ಮಾನ್ಯ ಮಾಡಿ SWSM ಬ್ಯಾಂಕ್ ಖಾತೆಗೆ authorization ಕಳುಹಿಸಲು ಕ್ರಮವಹಿಸಬೇಕು. ಇದಲ್ಲದೆ, 2014-15ರ ಸಾಲಿನ ಕ್ರಿಯಾ ಯೋಜನೆ ಸಂಬಂಧ ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ 12 ಗ್ರಾನೀಸ(2)2014, ದಿನಾಂಕ:16.05.2014ರಲ್ಲಿ ನಿಗಧಿಪಡಿಸಿರುವ ಅನುದಾನದ ವ್ಯಾಪ್ತಿಯೊಳಗೆ ಬಿಲ್‌ಗಳನ್ನು ಮಾನ್ಯ ಮಾಡಲು ಸಹ ಕ್ರಮವಹಿಸಬೇಕು. **ಆದರೆ, ಈ ರೀತಿಯ authorization ಮಾಡುವ ಮುನ್ನ EE/PRED ರವರು IMISನಲ್ಲಿ ಸದರಿ ಯೋಜನೆಗಳ ಮಾಹಿತಿ ದಾಖಲಿಸಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು.** ಆದರೆ, ಯಾವುದೇ ಕಾರಣಕ್ಕೂ ಒಟ್ಟಾರೆ ಜಿಲ್ಲಾ ಪಂಚಾಯತಿಗೆ ಕ್ರಿಯಾ ಯೋಜನೆ ಸಂಬಂಧ ಅನುಮತಿಸಿರುವ ಗರಿಷ್ಠ ಮಿತಿಯನ್ನು ಮೀರಿ ಗೊತ್ತುಪಡಿಸಿದ SWSM ಬ್ಯಾಂಕ್ ಖಾತೆಗೆ authorization ಕಳುಹಿಸತಕ್ಕದಲ್ಲ. ಅಂತೆಯೇ, ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು, ಅಧಿಕೃತವಾಗಿ EE/PRED, CAOಗಳು ಧೃಡೀಕರಿಸಿ, ನಿಗದಿತ ಪ್ರಪತ್ರದಲ್ಲಿ ಸಲ್ಲಿಸಿದ ಬಿಲ್‌ಗಳನ್ನು ಮಾನ್ಯ ಮಾಡಲು ಕ್ರಮವಹಿಸಬೇಕೆಂದು ತಿಳಿಸಿದೆ.

15/7/14

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
ಇಮೇಲ್:rk3452000@gmail.com
ಫೋನ್:22032806, ಫ್ಯಾಕ್ಸ್:22203175

ಇವರಿಗೆ:

1. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಮುಖ್ಯ ಇಂಜನಿಯರ್, ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆ, ಆನಂದರಾವ್ ವೃತ್ತ, ಗ್ರಾಮೀಣಾಭಿವೃದ್ಧಿ ಭವನ, ಬೆಂಗಳೂರು-09.
3. ರಾಜ್ಯದ ಎಲ್ಲಾ (8) ಅಧೀಕ್ಷಕ ಅಭಿಯಂತರರು, ಪಂಚಾಯತ್‌ರಾಜ್ ಇಂಜನಿಯರಿಂಗ್ ವೃತ್ತ ಕಛೇರಿಗಳು.
4. ರಾಜ್ಯದ ಎಲ್ಲಾ (38) ಪಂಚಾಯತ್‌ರಾಜ್ ಇಂಜನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜನಿಯರ್‌ಗಳು.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ. ವಿಧಾನಸೌಧ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿ(ಪಂ.ರಾಜ್) ಗ್ರಾಅಪಂ.ರಾಜ್ ಇಲಾಖೆ ಮತ್ತು ಎಲ್ಲಾ ನಿರ್ದೇಶಕರುಗಳು, ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ.ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು / ಆಪ್ತ ಸಹಾಯಕರುಗಳು.
4. ನಿರ್ದೇಶಕರು, SWSM ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ ಗ್ರಾಅಪಂ.ರಾಜ್ ಇಲಾಖೆ, ಕಾವೇರಿ ಭವನ, ಬೆಂಗಳೂರು-9.
5. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು-01.